# ಇಲಿ ಬೇಟೆ!



ಭಾವು ಪತ್ತಾರ್

ಇಲಿ ಬೇಟೆ ಎಂದರೆ ಸುಲಭವಲ್ಲ; ಹುಲಿಯನ್ನಾದರೂ ಬೇಟೆಯಾಡಬಹುದು, ಆದರೆ ಇಲಿಯನ್ನಲ್ಲ!

■ ಎಸ್.ಜಿ. ಶಿವಶಂಕರ್

ಟೈಟಲ್ಲು ತಪ್ಪಾಗಿರಬೇಕು, ಹುಲಿ ಬೇಟೆ ತಪ್ಪಾಗಿ ಮುದ್ರಾರಾಕ್ಷಸನ ಹಾವಳಿಯಿಂದ ಇಲಿ ಬೇಟೆಯಾಗಿದೆ ಎಂದುಕೊಂಡಿರಾ..? ಇಲ್ಲ, ಟೈಟಲ್ಲು ಟೈಟಾಗೇ ಇದೆ! ಇದು ಹುಲಿ ಬೇಟೆ ಲೇಖನವಲ್ಲ! ಬದಲಿಗೆ ಇಲಿ ಬೇಟೆ ಲೇಖನ!

ಏನು? ಯಃಕಶ್ಚಿತ್ ಇಲಿಯ ಬಗೆಗಾ? ಮೂಗು ಮುರಿಯಬೇಡಿ! ಹುಲಿ ಬೇಟೆ ಸುಲಭ, ಆದರೆ ಇಲಿ ಬೇಟೆ ಸುಲಭವಲ್ಲ! ಹುಲಿ ಬೇಟೆಯಾಡುವವರು ಗನ್ನು, ಬುಲೆಟ್ಟು, ಕಾದು ಕೂರಲು ಸರಿಯಾದ ಜಾಗ, ಅದು ನಿಶ್ಚಿತ ಜಾಗಕ್ಕೆ ಬರಲು ಒಂದು ಮಿಕ ಎಲ್ಲವೂ ಸಿದ್ಧಪಡಿಸಿಕೊಂಡು ಬೇಟೆಯಾಡುತ್ತಾರೆ! ಆದರೆ ಇಲಿ ಬೇಟೆ ಹಾಗಲ್ಲ! ಅದಕ್ಕೆಂದು ಪ್ರತ್ಯೇಕ ಆಯುಧಗಳೇ ಇಲ್ಲ! ಮನೆಯ ಪೊರಕೆ, ದೊಣ್ಣೆ ಇಂತಹ ಕೈಗೆ ಸಿಗುವ ವಸ್ತುಗಳನ್ನೇ ಆಯುಧವನ್ನಾಗಿ ಮಾಡಿಕೊಂಡು ಇಲಿಯನ್ನು ಬೇಟೆಯಾಡಬೇಕು! ಇವು ಯಾವುವೂ ಸರಿಯಾದ ಆಯುಧಗಳಲ್ಲ. ಗೃಹೋಪಯೋಗಿ ವಸ್ತುಗಳು ತುರ್ತುಪರಿಸ್ಥಿತಿಯಲ್ಲಿ ಆಯುಧಗಳಾಗಿ ರೂಪಾಂತರಗೊಂಡಿರುತ್ತವೆ!